ಸುದ್ದಿ ಸಿಂಚನ

ಶ್ರೀ ಸಾಯಿ ಗೋಲ್ಡ್ ಪ್ಯಾಲೆಸ್‌ನಲ್ಲಿ 20% 'ಮೇಕಿಂಗ್ ಚಾರ್ಜ್' ವಿಶೇಷ ರಿಯಾಯಿತಿ

ಬೆಂಗಳೂರು: ನಗರದ ಪ್ರತಿಷ್ಠಿತ ಚಿನ್ನಾಭರಣಗಳ ಮಾರಾಟ ಮಳಿಗೆಗಳಲ್ಲಿ ಒಂದಾದ ಶ್ರೀಸಾಯಿ ಗೋಲ್ಡ್ ಪ್ಯಾಲೇಸ್‌ನ ಎಲ್ಲಾ ಶಾಖೆಗಳಲ್ಲಿ ವರಮಹಾಲಕ್ಷ್ಮೀ ಹಬ್ಬದ ಪ್ರಯುಕ್ತ ಗ್ರಾಹಕರಿಗೆ ಮೇಕಿಂಗ್ ಚಾರ್ಜಸ್‌ನಲ್ಲಿ ಶೇ.20ರಷ್ಟು ರಿಯಾಯಿತಿ ವಿಶೇಷ ಬಂಪರ್ ಆಫರ್ ಘೋಷಿಸಲಾಗಿದೆ. ನಮ್ಮ ಕುಟುಂಬದಂತಿರುವ ಗ್ರಾಹಕರ ವಿಶ್ವಾಸ ಉಳಿಸಿಕೊಂಡು ಉತ್ತಮ ಸೇವೆ ನೀಡುತ್ತಾ ಬಂದಿದ್ದೇವೆ. ವರಮಹಾಲಕ್ಷ್ಮೀ ಹಬ್ಬದ ಪ್ರಯುಕ್ತ ನಮ್ಮ ನೂತನ ಮಳಿಗೆ ಕನಕಪುರ ರಸ್ತೆಯ ರಘುವನಹಳ್ಳಿ ಸೇರಿದಂತೆ ಬಸವನಗುಡಿ, ಎಚ್‌ಎಸ್‌ಆರ್ ಲೇಔಟ್, ಯಲಹಂಕ, ಕೆ.ಆರ್.ಪುರ ಮತ್ತು ನಾಗರಬಾವಿ ಶಾಖೆಗಳಲ್ಲಿ ಮೇಕಿಂಗ್ ಚಾರ್ಜಸ್ ಮೇಲೆ ಶೇ.20ರಷ್ಟು ರಿಯಾಯಿತಿ ಲಭ್ಯವಾಗಲಿದೆ. ಗ್ರಾಹಕರು ನಿಮ್ಮ ಹತ್ತಿರ ಶಾಖೆಗಳಿಗೆ ಭೇಟಿ ನೀಡಿ ಈ ವಿಶೇಷ ರಿಯಾಯಿತಿ ಸದುಪಯೋಗಪಡಿಸಿಕೊಳ್ಳುವಂತೆ ಶ್ರೀಸಾಯಿ ಗೋಲ್ಡ್ ಪ್ಯಾಲೇಸ್‌ನ ಮಾಲೀಕ ಟಿ.ಎ.ಶರವಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೈಸ್ ಯೋಜನೆ ಕುರಿತು ತನಿಖೆ ನಡೆಸಿ: ಬೊಮ್ಮಾಯಿ

ಬೆಂಗಳೂರು: ನೈಸ್ ಯೋಜನೆಯಲ್ಲಿ ಹಲವು ನ್ಯೂನತೆಗಳಿದ್ದು, ಈ ಕುರಿತು ಸರ್ಕಾರ ಸಮಗ್ರ ತನಿಖೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳಬೇಕೆಂದು ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೈಸ್ ಯೋಜನೆಯಡಿ ನಿರ್ಮಿಸಲಾಗಿರುವ ರಸ್ತೆಯಿಂದ ಬೆಂಗಳೂರಿಗೆ ಒಂದಿಷ್ಟು ಅನುಕೂಲವಾಗಿರುವುದನ್ನು ಹೊರತುಪಡಿಸಿದರೆ, ಸಾರ್ವಜನಿಕರಿಂದ ಅತಿಯಾದ ಟೋಲ್ ವಸೂಲಿ ಮಾಡಲಾಗುತ್ತಿದೆ ಎಂಬ ದೂರುಗಳು ಮೊದಲಿನಿಂದಲೂ ಇವೆ ಎಂದು ಹೇಳಿದರು. ನೈಸ್ ಯೋಜನೆಯ ಅಕ್ರಮ ಹಾಗೂ ನ್ಯೂನತೆಗಳ ಕುರಿತು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳಲ್ಲಿ ಹಲವು ಬಾರಿ ಅರ್ಜಿಗಳು ಸಲ್ಲಿಕೆಯಾಗಿವೆ. ಇತ್ತೀಚೆಗೆ ಹೈಕೋರ್ಟ್ ನೀಡಿರುವ ಗಮನಾರ್ಹ ಟಿಪ್ಪಣಿಯಿಂದಾಗಿ ಈ ವಿಷಯ ದ ಗಂಭೀರತೆ ಹೆಚ್ಚಾಗಿದೆ. ನೈಸ್ ಕುರಿತು ಪಬ್ಲಿಕ್ ಅಕೌಂಟ್ಸ್ ಕಮಿಟಿ, ವರದಿ ಹಾಗೂ ಲೋಕೋಪಯೋಗಿ ಇಲಾಖೆ ನೀಡಿದ ವರದಿಗಳು ಈಗಾಗಲೇ ಸರ್ಕಾರದ ಬಳಿ ಇವೆ. ಯೋಜನೆಯಿಂದ ಸಂತ್ರಸ್ತರಾದ ಅನೇಕ ಜನರಿಗೆ ಹಾಗೂ ಭೂಮಿ ಕಳೆದುಕೊಂಡ ರೈತರಿಗೆ ಇಂದಿಗೂ ಸರಿಯಾದ ಪರಿಹಾರ ತಲುಪಿಲ್ಲ. ಕೆಲವರಿಗೆ ಪರ್ಯಾಯ ನಿವೇಶನ ಕೊಡುವುದಾಗಿ ಹೇಳಿ ಇನ್ನೂ ನೀಡಿಲ್ಲ ಎಂದು ಆರೋಪಿಸಿದರು.



ಟೋಲ್ ದರ ಕಡಿತ- ಮರುಪರಿಶೀಲನೆ: ಅತಿಯಾದ ಟೋಲ್ ವಸೂಲಿಯನ್ನು ತಡೆದು ದರ ಕಡಿತಗೊಳಿಸಬೇಕು ಮತ್ತು ಇಡೀ ಯೋಜನೆಯನ್ನು ಪುನರ್‌ವಿಮರ್ಶೆ ಮಾಡಿ ಸಮಗ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

5 ಕಿಮೀ ರನ್‌ಫಾರ್ ರಾಜೀವ್ ಮ್ಯಾರಥಾನ್ ಯಶಸ್ವಿ

ರಾಜೀವ್ ಗಾಂಧಿ ಜನ್ಮದಿನ ಅಂಗವಾಗಿ ಆಯೋಜನೆ | ಬಿಕೆ, ಶ್ರೀನಿವಾಸ್, ಸಪ್ತಮಿ ಗೌಡ, ಪ್ರಿಯಾ ಹೆಗ್ಡೆ ಸೇರಿ ಸಾವಿರಾರು ಮಂದಿ ಭಾಗಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಜನ್ಮದಿನದ ಅಂಗವಾಗಿ ಕಾಂಗ್ರೆಸ್ ಸೇವಾದಳವು ನಗರದ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ 'ರನ್ ಫಾರ್‌ರಾಜೀವ್' 5 ಕಿ.ಮೀ ಮ್ಯಾರಥಾನ್‌ನಲ್ಲಿ ಸಾವಿರಾರು ಸಂಖ್ಯೆಯಲ್ಲಿ ಯುವಕ, ಯುವತಿಯರು, ಸಾರ್ವಜನಿಕರು ಭಾಗವಹಿಸಿ ಯಶಸ್ವಿಗೊಳಿಸಿದರು.

5 ಕಿ.ಮೀ.ಗಳ ಮ್ಯಾರಥಾನ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಮೊದಲ ಐವರು ಪುರುಷರು ಮತ್ತು ಐವರು ಮಹಿಳೆಯರಿಗೆ ಮೊದಲೇ ನಿಗದಿಪಡಿಸಿದ್ದಂತೆ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.

ಕಾಂಗ್ರೆಸ್ ಸೇವಾದಳದ ಮುಖ್ಯ ಸಂಘಟಕ ಬಿ.ವಿ.ಶ್ರೀನಿವಾಸ್ ಅವರ ನೇತೃತ್ವದಲ್ಲಿ ನಡೆದ 2ನೇ ವರ್ಷದ ಮ್ಯಾರಥಾನ್‌ಗೆ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ರಿಜ್ವಾನ್ ಅರ್ಷದ್ ಸೇರಿದಂತೆ ಪಕ್ಷದ ವಿವಿಧ ನಾಯಕರು ಬೆಳಗ್ಗೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಹರಿಪ್ರಸಾದ್ ಅವರು, ಭಾರತದ ಮಾಹಿತಿ ತಂತ್ರಜ್ಞಾನದ ಹರಿಕಾರ, ಆಧುನಿಕ ಭಾರತದ ಶಿಲ್ಪಿ ಎಂದೇ ಕರೆಯಲ್ಪಡುವ ರಾಜೀವ್ ಗಾಂಧಿ ಅವರು ಯುವ ಸಮೂಹದಲ್ಲಿ ಇಟ್ಟಿದ್ದ ನಂಬಿಕೆ, ಆಧುನಿಕ ಮತ್ತು ಪ್ರಗತಿಪರ ರಾಷ್ಟ್ರದ ದೃಷ್ಟಿಕೋನವನ್ನು ಈ ಮ್ಯಾರಥಾನ್ ಸಾಕ್ಷೀಕರಿಸಿದಂತಿದೆ ಎಂದರು. ಸಚಿವ ರಿಜ್ವಾನ್ ಅರ್ಷದ್ ಮಾತನಾಡಿ, ಸಾವಿರಾರು ಯುವಜನರು ಈ ಮ್ಯಾರಥಾನ್‌ನಲ್ಲಿ ಭಾಗವಹಿಸಿರುವುದು ನೋಡಿದಾಗ ಆರೋಗ್ಯಕರ ಸಮಾಜದಕಡೆ ನಡೆಯುತ್ತಿದ್ದಾರೆ ಎನಿಸುತ್ತಿದೆ. ಕಾಂಗ್ರೆಸ್ ಸದಾಕಾಲ ಸಮಾಜವನ್ನು ಒಗ್ಗೂಡಿಸುವ ವೇದಿಕೆ ಸೃಷ್ಟಿಸುತ್ತಾ ಬಂದಿದೆ. ಮನುಷ್ಯ ಮನುಷ್ಯರ ಮಧ್ಯೆ ಒಡಕು ಸೃಷ್ಟಿಸುವುದು ಬಹಳ ಸುಲಭ, ಆದರೆ ಒಗ್ಗೂಡಿಸುವುದು ಬಹಳ ಕಷ್ಟ. ಶ್ರೀನಿವಾಸ್ ಅವರ ತಂಡ ಯುವಕರನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿರುವುದು ಅಭಿನಂದನೀಯ ಎಂದರು.

ನಟಿಯರಾದ ಸಪ್ತಮಿ ಗೌಡ ಮತ್ತು ಪ್ರಿಯಾ ಹೆಗ್ಡೆ ಮಾತನಾಡಿ, ವಿದ್ಯಾರ್ಥಿಗಳಿಂದ ವಯಸ್ಸಾದವರೆಗೂ ಎಲ್ಲರೂ ಕೂಡ ಉತ್ತಮ ಗುಣಮಟ್ಟದ ಆಹಾರ ಸೇವನೆ, ನಿತ್ಯ ನಿಯಮಿತವಾಯುವಿಹಾರ, ಸಾಧ್ಯವಾದಷ್ಟು ವ್ಯಾಯಾಮದಂತಹ ಅಭ್ಯಾಸಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು. ಇದಕ್ಕೂ ಮುನ್ನ ತಾರೆಯರು ನಡೆಸಿಕೊಟ್ಟ ಮಾಸ್ ಡ್ಯಾನ್ಸ್, ವರ್ಕೌಟ್ ಗಮನ ಸೆಳೆಯಿತು.

ಈ ವೇಳೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಸವರಾಜ್, ಎನ್‌ಎಸ್‌ಯುಐ ಅಧ್ಯಕ್ಷ ಕೀರ್ತಿ ಗಣೇಶ್ ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಸೇವಾದಳದಿಂದ ಆಯೋಜಿಸಿದ್ದ ರನ್‌ಫಾರ್ ರಾಜೀವ್ ಮ್ಯಾರಥಾನ್‌ಗೆ ಬಿ.ಕೆ.ಹರಿಪ್ರಸಾದ್ ಚಾಲನೆ.

ನಗರದಲ್ಲಿ ರನ್‌ಫಾರ್ ರಾಜೀವ್ ಮ್ಯಾರಥಾನ್‌ನಲ್ಲಿ ಭಾಗಿಯಾಗಿದ್ದ ಸಾವಿರಾರು ನಾಗರಿಕರು.

5 ಮಹಿಳೆ, ಪುರುಷ ವಿಜೇತರಿಗೆ ಬಹುಮಾನ

ಮ್ಯಾರಥಾನ್‌ನಲ್ಲಿ 5 ಕಿ.ಮೀ. ಓಟವನ್ನು ಮೊದಲು ಪೂರೈಸಿದ ಐವರು ಮಹಿಳಾ ಮತ್ತು ಐವರು ಪುರುಷ ಸ್ಪರ್ಧಿಗಳಿಗೆ ಗಣ್ಯರು ನಗದು ಬಹುಮಾನ ನೀಡಿ ಪ್ರೋತ್ಸಾಹಿಸಿದರು. ಮೊದಲ ಬಹುಮಾನ 1 ಲಕ್ಷ ರು, ದ್ವಿತೀಯ ಬಹುಮಾನ 75 ಸಾವಿರ ರು., ತೃತೀಯ ಬಹುಮಾನ 50 ಸಾವಿರ ರು., ನಾಲ್ಕನೇ ಬಹುಮಾನ 25 ಸಾವಿರ ರು. ಮತ್ತು ಸಮಾಧಾನಕರ ಬಹುಮಾನ ನೀಡಿ ಗೌರವಿಸಲಾಯಿತು. ಮಹಿಳಾ ವಿಭಾಗದ ಪೈಕಿ ಸೋನಂ ಪಾರ್ಮರ್ ಪ್ರಥಮ, ಯಾಶಿ ಸಾಚನ್ ದ್ವಿತೀಯ, ತಮನ್ನ ತಮನ್ನಾ ತೃತೀಯ, ಪ್ರಿಯಾಂಕಾ ಸಿ. ನಾಲ್ಕನೇ ಬಹುಮಾನ ಮತ್ತು ಆರಾಧನಾ ಕುಮಾರಿ ಸಮಾಧಾನಕರ ಬಹುಮಾನ. ಪುರುಷ ವಿಭಾಗದ ಪೈಕಿ ಶಾರುಖ್ ಖಾನ್ ಪ್ರಥಮ, ಹರೀಶ್ ಶೀರನ್ ದ್ವಿತೀಯ, ಗೌರವ್ ಕಸನ ತೃತೀಯ, ಶೈಲೇಶ್ ಕುಶವಾಹ 4ನೇ ಬಹುಮಾನ, ಆದಿತ್ಯ ತ್ಯಾಗಿ ಸಮಾಧಾನಕರ ಬಹುಮಾನ ಪಡೆದುಕೊಂಡರು.

ಪ್ರಾಪರ್ಟಿ ಆ್ಯಂಡ್ ಲೈಫ್‌ಸ್ಟೈಲ್ ಎಕ್ಸ್‌ಪೋಗೆ ತೆರೆ

ಕನ್ನಡಪ್ರಭ, ಏಷ್ಯಾನೆಟ್ ಸುವರ್ಣ ನ್ಯೂಸ್ ಆಯೋಜನೆ | ಜನರಿಂದ ಉತ್ತಮ ಸ್ಪಂದನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕನ್ನಡಪ್ರಭ ಹಾಗೂ ಏಷ್ಯಾನೆಟ್ ಸುವರ್ಣ ನ್ಯೂಸ್‌ನಿಂದ ನಗರದ ಮೈಸೂರು ರಸ್ತೆಯ ನಾಯಂಡಹಳ್ಳಿ ನೈಸ್ ರಸ್ತೆಯ ಜಂಕ್ಷನ್ ಬಳಿಯ ನಂದಿ ಲಿಂಕ್ ಗ್ರೌಂಡ್‌ನಲ್ಲಿ ಆಯೋಜಿಸಿರುವ 3 ದಿನಗಳ 'ಪ್ರಾಪರ್ಟಿ ಆ್ಯಂಡ್ ಲೈಫ್ ಸ್ಟೈಲ್ ಎಕ್ಸ್‌ಪೋ-2026' ಅದ್ಭುತ ಜನಸ್ಪಂದನೆ ವ್ಯಕ್ತವಾಯಿತು.

ಭಾನುವಾರ ಬೆಳಗ್ಗಿನಿಂದಲೇ ನೂರಾರು ಸಂಖ್ಯೆಯಲ್ಲಿ ಜನರು ಆಗಮಿಸಿ, ವಿವಿಧ ಮಳಿಗೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ತಮ್ಮ ಕನಸಿನ ಮನೆ ನಿರ್ಮಾಣಕ್ಕೆ ಬೇಕಾದ ಪ್ರಾಪರ್ಟಿ, ಪ್ಲಾಟ್, ವಿಲ್ಲಾ, ಅಪಾರ್ಟ್‌ಮೆಂಟ್ ಹಾಗೂ ಭೂಮಿಯ ಬಗ್ಗೆ ಮಾಹಿತಿ ಪಡೆಯಲು ಸಾರ್ವಜನಿಕರು ಆಸಕ್ತಿಯಿಂದ ವಿವಿಧ ಬಿಲ್ಡರ್‌ಗಳು ಮತ್ತು ಡೆವಲಪರ್‌ಗಳ ಮಳಿಗೆಗಳಿಗೆ ಭೇಟಿ ನೀಡಿದರು. ಒಂದೇ ಸ್ಥಳದಲ್ಲಿ ಹಲವು ಪ್ರಾಪರ್ಟಿ ಆಯ್ಕೆಗಳನ್ನು ಪರಿಶೀಲಿಸುವ ಅವಕಾಶ ಜನರಿಗೆ ಈ ಎಕ್ಸ್‌ಪೋದಲ್ಲಿ ದೊರೆಯಿತು.

ಪ್ರಾಪರ್ಟಿ ಮಾತ್ರವಲ್ಲದೆ, ಜನರ ದೈನಂದಿನ ಜೀವನಶೈಲಿಗೆ ಅಗತ್ಯವಾಗಿರುವ ಫ್ಯಾಷನ್, ಸೀರೆ, ಜ್ಯುವೆಲರಿ, ಫರ್ನಿಚರ್, ಕಾರ್ಪೆಟ್, ಹೆಲ್ತ್‌ಕೇರ್ ಹಾಗೂ ವಿವಿಧ ಲೈಫ್‌ಸ್ಟೈಲ್ ಉತ್ಪನ್ನಗಳ ಮಳಿಗೆಗಳೂ ವಿಶೇಷ ಆಕರ್ಷಣೆಯಾಗಿದ್ದವು. ಕುಟುಂಬ ಸಮೇತರಾಗಿ ಆಗಮಿಸಿದ ಜನರು ಶಾಪಿಂಗ್ ಮಾಡುವ ಮೂಲಕ ಎಕ್ಸ್‌ಪೋದ ವೈವಿಧ್ಯತೆಯನ್ನು ಮತ್ತಷ್ಟು ಹೆಚ್ಚಿಸಿದರು.

ಬಸವನಗುಡಿ ಶಾಸಕ ರವಿ ಸುಬ್ರಮಣ್ಯ ಅವರು ಎಕ್ಸ್‌ಪೋಗೆ ಭೇಟಿ ನೀಡಿ, ವಿವಿಧ ಮಳಿಗೆಗಳನ್ನು ವೀಕ್ಷಿಸಿ ಮಾಹಿತಿ ಪಡೆದರು. 3 ದಿನಗಳ ಕಾಲ ನಡೆದ ಎಕ್ಸ್‌ಪೋದಲ್ಲಿ ಭಾಗವಹಿಸಿದ್ದ ಎಲ್ಲಾ ಮಳಿಗೆಗಳಿಗೆ ಏಷ್ಯಾನೆಟ್ ಸುವರ್ಣ ನ್ಯೂಸ್ ಹಾಗೂ ಕನ್ನಡಪ್ರಭದ ಸಮೂಹ ಸಂಪಾದಕೀಯ ನಿರ್ದೇಶಕ ರವಿ ಹೆಗಡೆ ಅವರು ಭೇಟಿ ನೀಡಿ, ಪ್ರತಿಯೊಬ್ಬ ಸ್ಟಾಲ್ ಪ್ರತಿನಿಧಿಗಳೊಂದಿಗೆ ಮಾತುಕತೆನಡೆಸಿ, ಅವರಭಾಗವಹಿಸುವಿಕೆಗೆ ಅಭಿನಂದನೆ ಸಲ್ಲಿಸಿದರು. ಇದೇ ವೇಳೆ ಎಲ್ಲಾ ಮಳಿಗೆಗಳಿಗೆ ಸ್ಮರಣಿಕೆ ನೀಡಿ ಗೌರವಿಸಿದರು. 3 ದಿನಗಳ ಕಾಲ ನಡೆದ ಈ ಪ್ರಾಪರ್ಟಿ ಆ್ಯಂಡ್ ಲೈಫ್‌ಸ್ಟೈಲ್ ಎಕ್ಸ್‌ಪೋ, ಪ್ರಾಪರ್ಟಿ ಖರೀದಿದಾರರು, ಹೂಡಿಕೆದಾರರು, ಕುಟುಂಬಗಳು ಹಾಗೂ ಲೈಫ್‌ಸ್ಟೈಲ್ ಉತ್ಪನ್ನಗಳ ಖರೀದಿದಾರರಿಗೆ ಒಂದೇ ವೇದಿಕೆಯಲ್ಲಿ ಹಲವು ಆಯ್ಕೆಗಳನ್ನು ಒದಗಿಸುವ ಮೂಲಕ ಯಶಸ್ವಿಯಾಯಿತು.

ಪ್ರಾಪರ್ಟಿ ಆ್ಯಂಡ್ ಲೈಫ್‌ಸ್ಟೈಲ್ ಎಕ್ಸ್‌ಪೋ-2026'ಭೇಟಿ ನೀಡಿದ್ದ ಶಾಸಕ ರವಿ ಸುಬ್ರಹ್ಮಣ್ಯ ಅವರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಪರ್ವ ಗ್ರೂಪ್ ಸಂಸ್ಥಾಪಕ ನೀಲೇಶ್ ಸೇರಿದಂತೆ ಇತರರು ಇದ್ದರು.

ಮಹಿಳಾ ಪಿಎಸ್‌ಐ ಮೇಲೆ ಹಲ್ಲೆ, ನಿಂದನೆ

ಕ್ಯಾಮೆರಾದಲ್ಲಿ ವಿಡಿಯೋ ಸೆರೆ | ನಾಲ್ವರ ವಿರುದ್ಧ ಕೇಸ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕರ್ತವ್ಯನಿರತ ಮಹಿಳಾ ಪೊಲೀಸ್ ಸಬ್ ಇನ್‌ಸ್ಪೆಕ್ಟರ್(ಪಿಎಸ್‌ಐ) ಮೇಲೆ ನಾಲ್ವರು ಹಲ್ಲೆ ನಡೆಸಿದ್ದಲ್ಲದೆ, ಅಶ್ಲೀಲ ಪದಗಳಿಂದ ನಿಂದಿಸಿರುವ ಘಟನೆ ಆ.12ರಂದು ಕೆ.ಆರ್.ಪುರದ ಭಟ್ಟರಹಳ್ಳಿ ಸಿಗ್ನಲ್ ಬಳಿ ನಡೆದಿದೆ. ಕೆ.ಆರ್.ಪುರ ಸಂಚಾರ ಠಾಣೆ ಪಿಎಸ್‌ಐ ನಯನಾ ಅವರ ಮೇಲೆ ಹಲ್ಲೆ ಮಾಡಲಾಗಿದೆ. ನಯನಾ ಅವರು ನೀಡಿದ ದೂರಿನ ಮೇರೆಗೆ ಹೇಮಂತ್ ರೆಡ್ಡಿ, ರಾಹುಲ್, ಹರ್ಷಿತ್ ರೆಡ್ಡಿ ಹಾಗೂ ರಾಧಾಕೃಷ್ಣ ರೆಡ್ಡಿ ಎಂಬವರ ವಿರುದ್ಧ ಎಫ್ ಐಆರ್ ದಾಖಲಾಗಿದ್ದು, ಆರೋಪಿಗಳಿಗೆ ನೋಟಿಸ್ ನೀಡಲಾಗಿದೆ. ಆರೋಪಿಗಳ ಕೃತ್ಯವು ಅಧಿಕಾರಿಗಳ ಬಾಡಿವೋರ್ನ್ ಕ್ಯಾಮೆರಾದಲ್ಲಿ ಸೆರೆ ಯಾಗಿದ್ದು, ವಿಡಿಯೋ ಸಮೇತ ದೂರು ದಾಖಲಿಸಿದ್ದಾರೆ. ಆರೋಪಿಗಳ ಪೈಕಿ ಹೇಮಂತ್ ರೆಡ್ಡಿ ಸಂಚಾರ ನಿಯಮ ಉಲ್ಲಂಘಿಸಿ ಸಂಚಾರ ದಟ್ಟಣೆಗೆ ಕಾರಣವಾಗಿದ್ದಲ್ಲದೆ, ಕಾರು ಚಾಲಕ ಶ್ರೇಯಸ್ ಎಂಬುವರ ಜತೆ ಜಗಳ ಮಾಡುತ್ತಿದ್ದ. ಆಗ ಸ್ಥಳದಲ್ಲಿದ್ದ ಸಂಚಾರ ಪೊಲೀಸ್ ಕಾನ್‌ಸ್ಟೇಬಲ್ ಮಂಜುನಾಥ್, ಆರೋಪಿಗೆ ಜಗಳ ನಿಲ್ಲಿಸಿ, ಟ್ರಾಫಿಕ್ ಜಾಮ್ ಆಗಿದೆ. ಮೊದಲು ವಾಹನ ತೆಗೆಯಿರಿ ಎಂದು ತಿಳಿಸಿದ್ದಾರೆ. ಅದಕ್ಕೆ ಕೋಪಗೊಂಡು ಜಗಳಕ್ಕೆ ಇಳಿದಿದ್ದಾನೆ.

ನಾನು ಲಾಯರ್!: ಇದನ್ನು ಗಮನಿಸಿದ ಪಿಎಸ್‌ಐ ನಯನಾ ಸ್ಥಳಕ್ಕೆ ಆಗಮಿಸಿ ಯಾಕೆ ಜಗಳ ಮಾಡುತ್ತಿದ್ದಿಯಾ ಎಂದು ಪ್ರಶ್ನಿಸಿದಾಗ ಆರೋಪಿ ನಾನೂ ಲಾಯರ್‌ಎಂದು ಪಿಎಸ್‌ಐ ಕೈ ಹಿಡಿದು ಎಳೆದಾಡಿ ಹಲ್ಲೆ ಮಾಡಿದ್ದಾನೆ. ನಂತರ ರಾಹುಲ್ ಎಂಬಾತನನ್ನು ಕರೆಸಿಕೊಂಡಿದ್ದಾರೆ. ಆತ ಸಹ ನನ್ನನು ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಬೆದರಿಕೆ ಹಾಕಿದ್ದಾನೆ. ಆ ವೇಳೆಗೆ ಪ್ರಮುಖ ಆರೋಪಿ ಹೇಮಂತ ರೆಡ್ಡಿಯ ಸಹೋದರ ಹರ್ಷಿತ್ ರೆಡ್ಡಿ ಹಾಗೂ ಆತನ ತಂದೆ ರಾಧಾಕೃಷ್ಣ ರೆಡ್ಡಿ ಸ್ಥಳಕ್ಕೆ ಬಂದು, ಇವಳು ಎಮ್ಮೆ ತರ ಇದ್ದಾಳೆ. ದರಿದ್ರದವಳು ಎಂದು ನಿಂದಿಸಿದರೆ, ಹರ್ಷಿತ್ ರೆಡ್ಡಿ, ನಿನ್ನ ತಲೆಯಲ್ಲಿ ಬುದ್ಧಿ ಇಲ್ಲವಾ? ನಿನ್ನನ್ನು ಏನು ಮಾಡುತ್ತೇನೆ ನೋಡು ಎಂದಿದ್ದಾನೆ. ಹೇಮಂತ್ ರೆಡ್ಡಿ ಎಂಬಾತ ಇವತ್ತು ನಿನ್ನನ್ನು ಕೆಲಸದಿಂದ ತೆಗೆಸಿ ಬಟ್ಟೆ ಬಿಚ್ಚಿಸುತ್ತೇನೆ ಎಂದು ಧಮ್ಕಿ ಹಾಕಿದ್ದಾನೆ. ನನ್ನ ಫೋಟೋ ಮತ್ತು ವಿಡಿಯೋ ತೆಗೆದು ಜಾಲತಾಣದಲ್ಲಿ ಹಾಕುತ್ತೇನೆ ಎಂದು ಬೆದರಿಕೆ ಹಾಕಿದ್ದಾರೆ.

ಕಸಾಪದಲ್ಲಿನ ಅಧಿಕಾರಶಾಹಿ ಧೋರಣೆಗೆ ತಡೆ ಬೀಳಲಿ: ಪ್ರೊ.ರಾಜೇಂದ್ರ ಚೆನ್ನಿ ಆಗ್ರಹ

ಬೆಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಲಾಗಿದ್ದ 'ನಮ್ಮ ಕನ್ನಡ ಸಾಹಿತ್ಯ ಪರಿಷತ್ತು: ಸಮಸ್ಯೆ-ಸವಾಲು - ಸಂವಾದ -ಮುನ್ನೋಟ' ಕುರಿತ ಸಾರ್ವಜನಿಕ ಚಿಂತನ-ಮಂಥನ ಕಾರ್ಯಕ್ರಮ ನಡೆಯಿತು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕನ್ನಡಿಗರ ಅಸ್ಮಿತೆ, ಭಾಷೆ, ಕಲೆ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಇಂದು ಮೂಲ ಧ್ಯೇಯೋದ್ದೇಶಗಳಿಂದ ವಿಮುಖವಾಗಿ, ವ್ಯಕ್ತಿ ಕೇಂದ್ರಿತ ಸಂಸ್ಥೆಯಾಗಿ ಬದಲಾಗುತ್ತಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆ ಎಂದು ಹಿರಿಯ ವಿಮರ್ಶಕ ಪ್ರೊ.ರಾಜೇಂದ್ರ ಚೆನ್ನಿ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ಭಾನುವಾರ ಬೆಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಲಾಗಿದ್ದ 'ನಮ್ಮ ಕನ್ನಡ ಸಾಹಿತ್ಯ ಪರಿಷತ್ತು: ಸಮಸ್ಯೆ - ಸವಾಲು - ಸಂವಾದ - ಮುನ್ನೋಟ' ಕುರಿತ ಸಾರ್ವಜನಿಕ ಚಿಂತನ-ಮಂಥನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡ ಸೇವೆಯ ಇಂದು ಅಧಿಕಾರದ ರೂಪಾಂತರವಾಗಿ ಬದಲಾಗಿದೆ. 1915ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ತನ್ನ ನಿಯಮಾವಳಿಗಳು ಹಾಗೂ ಮೂಲ ಧ್ಯೇಯಗಳನ್ನು ಬದಿಗೊತ್ತಿ ವ್ಯಕ್ತಿ ಕೇಂದ್ರಿತವಾಗಿ ಬೆಳೆದಾಗ ಇಂತಹ ಅವಗಢಗಳು ಸಂಭವಿಸುತ್ತವೆ. ಪರಿಷತ್ತಿನಲ್ಲಿ ಹೆಚ್ಚುತ್ತಿರುವ ಅಧಿಕಾರಶಾಹಿ ಧೋರಣೆಗೆ ತಕ್ಷಣವೇ ತಡೆ ಬೀಳಬೇಕು ಎಂದು ಹೇಳಿದರು.

ಕಸಾಪ ಕನ್ನಡಿಗರ ಆಸ್ತಿ: ಹಿರಿಯ ಸಾಹಿತಿ ಡಾ. ಬಂಜಗೆರೆ ಜಯಪ್ರಕಾಶ್ ಮಾತನಾಡಿ, ಪರಿಷತ್ತು ಯಾವುದೇ ಒಬ್ಬ ವ